ಬ್ರಹ್ಮಾವರ ಸಕ್ಕರೆ ಕಾರ್ಖಾನೆ ನಷ್ಟದಲ್ಲಿರುವ ಬಗ್ಗೆ.

1820. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡದಲ್ಲಿರುವ ಏಕೈಕ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಈಗ ನಷ್ಟದಲ್ಲಿದೆಯೆ ;

ಆ) ಈ ಕಾರ್ಖಾನೆ ಚುರುಕಾಗಿ ಕಾರ್ಯ ನಿರ್ವಹಿಸುವಂತೆ ಸರ್ಕಾರ ಯಾವ ರೀತಿಯ ನೆರವನ್ನು ನೀಡಲು ಉದ್ದೇಶಿಸಿದೆ ;

ಇ) ಜಿಲ್ಲೆಯ ಕಬ್ಬು ಬೆಳೆಗಾರರಿಗೆ ಉಪಕಾರವಾಗುವ ಈ ಏಕೈಕ ಕಾರ್ಖಾನೆಯನ್ನು ಚೇತನಗೊಳಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೆ ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಹೌದು.

ಆ) ಕೇಂದ್ರ ಸರ್ಕಾರವು ಸಕ್ಕರೆ ಅಭಿವೃದ್ಧಿ ನಿಧಿಯಿಂದ ಮಂಜೂರು ಮಾಡಿರುವ ರೂ. 45.00 ಲಕ್ಷಗಳಿಗೆ ಖಾತರಿ ನಿಲ್ಲುವ ಹಾಗೂ ರೂ. 1.75 ಕೋಟಿ ನೆರವನ್ನು ಮಂಜೂರು ಮಾಡಬೇಕೆಂಬ ಕಾರ್ಖಾನೆಯ ಬೇಡಿಕೆಯ ಬಗೆಗಿನ ವಿಷಯಗಳು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) ಕಾರ್ಖಾನೆಯ ಪುನಃಶ್ಚೇತನದ ಸಾಧ್ಯಾಸಾಧ್ಯತೆಯ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಹಸಿರು ಕಾರ್ಡು ಮತ್ತು ಇತರ ಕಾರ್ಡುಗಳನ್ನು ನೀಡಿರುವ ಬಗ್ಗೆ.

1922. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ 1991ನೇ ಡಿಸೆಂಬರ್ ಅಖೈರುವರೆಗೆ ಇರುವ ಹಸಿರು ಕಾರ್ಡು ಮತ್ತು ಇತರ ಕಾರ್ಡುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) :

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಸಿರು ಕಾರ್ಡು ಮತ್ತು ಇತರೆ ಕಾರ್ಡುಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

ಇ) ಸರಿಯಾಗಿ ಎಲ್ಲ ವರ್ಗದ ಜನರಿಗೆ ಕಾರ್ಡುಗಳು ದೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 31.14.608 ಹಸಿರು ಪಡಿತರ ಚೀಟಿಗಳು

27.28.677 ಕೇಸರಿ ಪಡಿತರ ಚೀಟಿಗಳು

21.69.929 ಇತರೆ ಕಾರ್ಡುಗಳು.

(ಜಿಲ್ಲಾವಾರು ವಿವರ ಅನುಬಂಧ 'ಅ' ನಲ್ಲಿ ಲಗತ್ತಿಸಿದೆ).

ಆ) 1.28.755 ಹಸಿರು ಪಡಿತರ ಚೀಟಿಗಳು

2.56.967 ಕೇಸರಿ ಪಡಿತರ ಚೀಟಿಗಳು ಮತ್ತು

91.426 ಇತರೆ ಪಡಿತರ ಚೀಟಿಗಳು

(ತಾಲ್ಲೂಕು ವಿವರ ಅನುಬಂಧ 'ಅ' ನಲ್ಲಿ ಲಗತ್ತಿಸಿದೆ.

ಇ) ಬಂದಿರುತ್ತದೆ.

ಈ) ಪಡಿತರ ಚೀಟಿಗಳನ್ನು ಪಡೆಯದೆ ಇರುವ ಯಾವುದೇ ವರ್ಗದ ಕುಟುಂಬಗಳು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಲ್ಲಿ ಅಂತಹ ಕುಟುಂಬಗಳಿಗೆ ಕೂಡಲೇ ಪಡಿತರ ಚೀಟಿಗಳನ್ನು ವಿತರಣೆ ಮಾಡಲು ಸೂಚನೆ ನೀಡಲಾಗಿದೆ.

ಅನುಬಂಧ 'ಅ'

ಜಿಲ್ಲಾವಾರು ವಿವರಗಳನ್ನೊಳಗೊಂಡ ಹಸಿರು, ಕೇಸರಿ ಮತ್ತು ಇತರೆ ಪಡಿತರ ಚೀಟಿಗಳ ಸಂಖ್ಯೆ : (1991ನೇ ಡಿಸೆಂಬರ್ ಅಖೈರ್‌ನಲ್ಲಿದ್ದಂತೆ)

ಕ್ರ. ಸಂ.	ಜಿಲ್ಲೆಯ ಹೆಸರು	ಹಸಿರು ಕಾರ್ಡುಗಳು	ಕೇಸರಿ ಕಾರ್ಡುಗಳು	ಇತರೆ ಕಾರ್ಡುಗಳು
1.	ಬೆಂಗಳೂರು (ಆ.ಪ.ಪ್ರದೇಶ)	-	-	7.62.494
2.	ಬೆಂಗಳೂರು ನಗರ ಜಿಲ್ಲೆ	75.936	95.087	8.431
3.	ಬೆಂಗಳೂರು (ಗ್ರಾಮಾಂತರ ಜಿಲ್ಲೆ)	1.43.608	1.17.603	53.146
4.	ಬೆಳಗಾಂ	2.03.895	2.69.175	1.45.306
5.	ಬಳ್ಳಾರಿ	1.18.992	1.10.488	67.882
6.	ಬೀದರ್	83.511	92.380	32.647
7.	ಬಿಜಾಪುರ	1.98.479	2.28.066	1.00.365
8.	ಚಿಕ್ಕಮಗಳೂರು	1.04.040	62.608	30.802
9.	ಚಿತ್ರದುರ್ಗ	1.68.993	1.56.025	76.693
10.	ದಕ್ಷಿಣ ಕನ್ನಡ	1.28.755	2.56.967	91.426
11.	ಧಾರವಾಡ	2.57.120	1.44.475	1.74.012
12.	ಗುಲ್ಬರ್ಗ	2.08.013	1.45.571	78.491
13.	ಹಾಸನ	1.34.143	1.11.699	38.718

ಕ್ರ. ಸಂ.	ಜಿಲ್ಲೆಯ ಹೆಸರು	ಹಸಿರು ಕಾರ್ಡುಗಳು	ಕೇಸರಿ ಕಾರ್ಡುಗಳು	ಇತರೆ ಕಾರ್ಡುಗಳು
14.	ಕೊಡಗು	55,484	41,974	5,644
15.	ಕೋಲಾರ	1,91,654	1,32,032	83,361
16.	ಮಂಡ್ಯ	1,52,536	1,14,179	37,772
17.	ಮೈಸೂರು	2,49,004	1,66,455	1,58,482
18.	ರಾಯಚೂರು	1,73,078	1,62,685	54,947
19.	ಶಿವಮೊಗ್ಗ	1,40,777	1,09,662	72,380
20.	ತುಮಕೂರು	2,23,671	1,43,829	52,245
21.	ಉತ್ತರ ಕನ್ನಡ	1,02,919	67,717	44,685
	ಒಟ್ಟು	31,14,608	27,28,677	21,69,929

ಅನುಬಂಧ 'ಬ'

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ತಾಲ್ಲೂಕುವಾರು ಹಸಿರು ಮತ್ತು ಇತರೆ ಪಡಿತರ ಚೀಟಿಗಳ ಪಟ್ಟಿ

ಕ್ರ. ಸಂ.	ತಾಲ್ಲೂಕುಗಳು	ಹಸಿರು ಕಾರ್ಡುಗಳು	ಕೇಸರಿ ಕಾರ್ಡುಗಳು	ಇತರೆ ಕಾರ್ಡುಗಳು
1.	ಮಂಗಳೂರು (ಅ.ಪ)			54517
2.	ಮಂಗಳೂರು	16756	37769	5861
3.	ಉಡುಪಿ	18280	57566	9446
4.	ಕುಂದಾಪುರ	25214	26958	5745
5.	ಕಾರ್ಕಳ	13503	29005	5967
6.	ಪುತ್ತೂರು	15962	20750	4171
7.	ಬೆಳ್ತಂಗಡಿ	12486	35828	-
8.	ಬಂಟ್ವಾಳ	16864	31541	5689
9.	ಸುಳ್ಯ	9690	17550	
	ಒಟ್ಟು	128755	256967	91426